# KARNATAKA EXAMINATIONS AUTHORITY

**Exam: Entrance Exam for Selection to Govt. Sponsored IAS/ KAS Training Institute**

**SUB: General Studies** **Date : 04.06.2025**

| Sl No | A1 | B1 | C1 | D1 | Sl No | A1 | B1 | C1 | D1 |
|---|---|---|---|---|---|---|---|---|---|
| 1 | 3 | 2 | 3 | 1 | 51 | 3 | 1 | 3 | 2 |
| 2 | 3 | 4 | 4 | 2 | 52 | 4 | 2 | 3 | 4 |
| 3 | 3 | 1 | 1 | 2 | 53 | 1 | 2 | 3 | 1 |
| 4 | 4 | 4 | 4 | 3 | 54 | 4 | 3 | 4 | 4 |
| 5 | 4 | 1 | 2 | 3 | 55 | 2 | 3 | 4 | 1 |
| 6 | 1 | 2 | 4 | 2 | 56 | 4 | 2 | 1 | 2 |
| 7 | 1 | 1 | 2 | 3 | 57 | 2 | 3 | 1 | 1 |
| 8 | 1 | 3 | 1 | 2 | 58 | 1 | 2 | 1 | 3 |
| 9 | 2 | 4 | 1 | 4 | 59 | 1 | 4 | 2 | 4 |
| 10 | 2 | 1 | 4 | 2 | 60 | 4 | 2 | 2 | 1 |
| 11 | 3 | 2 | 4 | 3 | 61 | 4 | 3 | 3 | 2 |
| 12 | 2 | 2 | 1 | 4 | 62 | 1 | 4 | 2 | 2 |
| 13 | 1 | 2 | 2 | 4 | 63 | 2 | 4 | 1 | 2 |
| 14 | 4 | 1 | 4 | 4 | 64 | 4 | 4 | 4 | 1 |
| 15 | 1 | 2 | 3 | 1 | 65 | 3 | 1 | 1 | 2 |
| 16 | 4 | 1 | 2 | 4 | 66 | 2 | 4 | 4 | 1 |
| 17 | 3 | 3 | 3 | 3 | 67 | 3 | 3 | 3 | 3 |
| 18 | 2 | 3 | 2 | 2 | 68 | 2 | 2 | 2 | 3 |
| 19 | 3 | 1 | 2 | 3 | 69 | 2 | 3 | 3 | 1 |
| 20 | 4 | 4 | 3 | 1 | 70 | 3 | 1 | 4 | 4 |
| 21 | 4 | 2 | 4 | 1 | 71 | 4 | 1 | 4 | 2 |
| 22 | 3 | 2 | 1 | 3 | 72 | 1 | 3 | 3 | 2 |
| 23 | 4 | 3 | 2 | 3 | 73 | 2 | 3 | 4 | 3 |
| 24 | 1 | 2 | 4 | 2 | 74 | 4 | 2 | 1 | 2 |
| 25 | 2 | 4 | 3 | 1 | 75 | 3 | 1 | 2 | 4 |
| 26 | 1 | 3 | 2 | 3 | 76 | 2 | 3 | 1 | 3 |
| 27 | 2 | 3 | 4 | 4 | 77 | 4 | 4 | 2 | 3 |
| 28 | 2 | 3 | 1 | 1 | 78 | 1 | 1 | 2 | 3 |
| 29 | 3 | 4 | 4 | 4 | 79 | 4 | 4 | 3 | 4 |
| 30 | 3 | 4 | 1 | 2 | 80 | 1 | 2 | 3 | 4 |
| 31 | 2 | 1 | 2 | 4 | 81 | 2 | 4 | 2 | 1 |
| 32 | 3 | 1 | 1 | 2 | 82 | 1 | 2 | 3 | 1 |
| 33 | 2 | 1 | 3 | 1 | 83 | 3 | 1 | 2 | 1 |
| 34 | 4 | 2 | 4 | 1 | 84 | 4 | 1 | 4 | 2 |
| 35 | 2 | 2 | 1 | 4 | 85 | 1 | 4 | 2 | 2 |
| 36 | 3 | 3 | 2 | 4 | 86 | 2 | 4 | 3 | 3 |
| 37 | 4 | 2 | 2 | 1 | 87 | 2 | 1 | 4 | 2 |
| 38 | 4 | 1 | 2 | 2 | 88 | 2 | 2 | 4 | 1 |
| 39 | 4 | 4 | 1 | 4 | 89 | 1 | 4 | 4 | 4 |
| 40 | 1 | 1 | 2 | 3 | 90 | 2 | 3 | 1 | 1 |
| 41 | 4 | 4 | 1 | 2 | 91 | 1 | 2 | 4 | 4 |
| 42 | 3 | 3 | 3 | 3 | 92 | 3 | 3 | 3 | 3 |
| 43 | 2 | 2 | 3 | 2 | 93 | 3 | 2 | 2 | 2 |
| 44 | 3 | 3 | 1 | 2 | 94 | 1 | 2 | 3 | 3 |
| 45 | 1 | 4 | 4 | 3 | 95 | 4 | 3 | 1 | 4 |
| 46 | 1 | 4 | 2 | 4 | 96 | 2 | 4 | 1 | 4 |
| 47 | 3 | 3 | 2 | 1 | 97 | 2 | 1 | 3 | 3 |
| 48 | 3 | 4 | 3 | 2 | 98 | 3 | 2 | 3 | 4 |
| 49 | 2 | 1 | 2 | 4 | 99 | 2 | 4 | 2 | 1 |
| 50 | 1 | 2 | 4 | 3 | 100 | 4 | 3 | 1 | 2 |

SHIKARAT.COM

1. ನ್ಯಾಯಿಕ ವಿಮರ್ಶೆಯು
   (1) ಶಾಸಕಾಂಗದ ಶಾಸನಗಳು ಮತ್ತು ಕಾರ್ಯಾಂಗದ ಆದೇಶಗಳ ಸಂವಿಧಾನ ಬದ್ಧತೆಯನ್ನು ಪರೀಕ್ಷಿಸುವ ನ್ಯಾಯಾಂಗದ ಅಧಿಕಾರ
   (2) ಸಂವಿಧಾನವನ್ನು ವ್ಯಾಖ್ಯಾನಿಸುವ ಮತ್ತು ಅರ್ಥೈಸುವ ನ್ಯಾಯಾಂಗದ ಅಧಿಕಾರ
   (3) ಕಾನೂನುಗಳನ್ನು ವ್ಯಾಖ್ಯಾನಿಸುವ ಮತ್ತು ಅರ್ಥೈಸುವ ನ್ಯಾಯಾಂಗದ ಅಧಿಕಾರ
   (4) ಕೇಂದ್ರ ಹಾಗೂ ರಾಜ್ಯಗಳ ನಡುವಿನ ವಿವಾದಗಳನ್ನು ಇತ್ಯರ್ಥಪಡಿಸುವ ನ್ಯಾಯಾಂಗದ ಅಧಿಕಾರ

2. 2026ರ ಏಷ್ಯನ್ ಕ್ರೀಡೆಗಳನ್ನು ಜಪಾನಿನ ಈ ಕೆಳಗಿನ ಯಾವ ನಗರಗಳಲ್ಲಿ ಆಯೋಜಿಸಲಾಗುವುದು?
   (1) ಹಿರೋಶಿಮಾ ಮತ್ತು ನಾಗಾಸಾಕಿ
   (2) ಐಚಿ ಮತ್ತು ನಗೋಯಾ
   (3) ಒಸಾಕಾ ಮತ್ತು ಕೋಬೆ
   (4) ಸೆಟೋ ಮತ್ತು ಹಂಡಾ

3. ಭಾರತ ಉಪರಾಷ್ಟ್ರಾಧ್ಯಕ್ಷರನ್ನು ಅವರ ಹುದ್ದೆಯಿಂದ ಈ ಮೂಲಕ ತೆಗೆದುಹಾಕಬಹುದು.
   (1) ಮಹಾಭಿಯೋಗ
   (2) ರಾಜ್ಯಸಭೆಯಿಂದ ಬಹುಮತದೊಂದಿಗೆ ಒಂದು ಗೊತ್ತುವಳಿಯನ್ನು ಅನುಮೋದಿಸುವುದು ಮತ್ತು ಲೋಕಸಭೆಯಿಂದ ಸಮ್ಮತಿಸುವುದು
   (3) ಲೋಕಸಭೆ ಮತ್ತು ರಾಜ್ಯಸಭೆಯಿಂದ ಮೂರನೇ ಎರಡರಷ್ಟು ಬಹುಮತದೊಂದಿಗೆ ಗೊತ್ತುವಳಿಯನ್ನು ಅನುಮೋದಿಸುವುದು
   (4) ಸಂಸತ್ತಿನ ಜಂಟಿ ಅಧಿವೇಶನದಲ್ಲಿ ಮೂರನೇ ಎರಡರಷ್ಟು ಬಹುಮತದಿಂದ ಗೊತ್ತುವಳಿ ಅನುಮೋದಿಸುವುದು

4. ಭಾರತ ಸಂವಿಧಾನದ 117 (3)ನೇ ವಿಧಿಯಡಿಯಲ್ಲಿ ಹಣಕಾಸಿನ ಬಿಲ್‌ಗೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆ/ಗಳು ಸರಿಯಾಗಿದೆ/ವೆ?
   a) ಈ ಮಸೂದೆಯನ್ನು ಲೋಕಸಭೆಯಲ್ಲಿಯೇ ಮೊದಲಿಗೆ ಮಂಡಿಸಬೇಕು.
   b) ಈ ಮಸೂದೆಯನ್ನು ಸದನದಲ್ಲಿ ರಾಷ್ಟ್ರಪತಿಗಳ ಶಿಫಾರಸ್ಸು ಪಡೆದ ನಂತರ ಮಾತ್ರ ಮಂಡಿಸುವುದು.
   c) ರಾಜ್ಯಸಭೆಯು ಈ ಮಸೂದೆಯನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿದೆ.
   d) ಈ ಮಸೂದೆಗೆ ಸಂಬಂಧಿಸಿದಂತೆ ಸಂಸತ್ತಿನ ಎರಡೂ ಸದನಗಳ ನಡುವೆ ಭಿನ್ನಾಭಿಪ್ರಾಯ ಮೂಡಿದಾಗ ರಾಷ್ಟ್ರಪತಿಗಳು ಜಂಟಿ ಅಧಿವೇಶನ ಕರೆಯಬಹುದು.

   ಆಯ್ಕೆಗಳು:
   (1) a ಮತ್ತು b ಮಾತ್ರ
   (2) a, b ಮತ್ತು c ಮಾತ್ರ
   (3) c ಮತ್ತು d ಮಾತ್ರ
   (4) b ಮಾತ್ರ

ಕಚ್ಚಾ ಕೆಲಸಕ್ಕೆ ಸ್ಥಳ

5. ರಾಜ್ಯಪಾಲರ ಹುದ್ದೆಗೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ?

(1) ಒಬ್ಬ ವ್ಯಕ್ತಿ ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ರಾಜ್ಯಗಳಿಗೆ ರಾಜ್ಯಪಾಲರಾಗಿ ನೇಮಕವಾಗಬಹುದು.

(2) ರಾಜ್ಯಪಾಲರು ರಾಷ್ಟ್ರಪತಿಗಳಿಂದ ನೇಮಕರಾಗುವರು.

(3) ರಾಜ್ಯಪಾಲರನ್ನು ಅಧಿಕಾರದಿಂದ ತೆಗೆದುಹಾಕಲು ಮಹಾಭಿಯೋಗ ವಿಧಾನವನ್ನು ಅನುಸರಿಸಲಾಗುತ್ತದೆ.

(4) ವಿ.ಎಸ್. ರಮಾದೇವಿ ಅವರು ಕರ್ನಾಟಕದ ಮೊದಲ ಮಹಿಳಾ ರಾಜ್ಯಪಾಲರಾಗಿದ್ದರು.

6. 1.75, 2.8 ಮತ್ತು 7 ಇವುಗಳ ಮಹತ್ತಮ ಸಾಮಾನ್ಯ ಅಪವರ್ತನ ________.

(1) 0.07
(2) 0.35
(3) 0.7
(4) 3.5

7. $x = \sqrt{\frac{\sqrt{5}+1}{\sqrt{5}-1}}$ ಆಗಿದ್ದರೆ, ಆಗ $5x^2-5x-1$ ನ ಬೆಲೆಯು

(1) 0
(2) 3
(3) 4
(4) 5

8. ಒಂದು ಭಾಷೆಯಲ್ಲಿ 'NONE' ಎಂಬುದನ್ನು 'LQLG'ಯಾಗಿ ಬರೆದರೆ, 'LAMB' ಅನ್ನು ಯಾವ ರೀತಿಯಲ್ಲಿ ಬರೆಯಬಹುದು?

(1) JCDK
(2) JCKD
(3) JDCK
(4) JDKC

9. ಒಬ್ಬ ಬಿಲ್ಡರ್ 92 ದಿನಗಳಲ್ಲಿ ಒಂದು ಕೆಲಸವನ್ನು ಮುಗಿಸಲು ಒಪ್ಪಿ ತೆಗೆದುಕೊಂಡನು ಮತ್ತು 110 ಕೆಲಸಗಾರರನ್ನು ನೇಮಿಸಿಕೊಂಡನು. ಆದರೆ 48 ದಿನಗಳ ನಂತರ 3/5 ಭಾಗದ ಕೆಲಸವು ಮುಗಿದಿದ್ದನ್ನು ಗಮನಿಸಿದನು. ಹಾಗಾದರೆ ಪೂರ್ತಿ ಕೆಲಸವು ನಿರ್ದಿಷ್ಟ ಸಮಯದಲ್ಲಿಯೇ ಮುಗಿಯಲು ಅವನು ________ ಸಂಖ್ಯೆಯ ಕೆಲಸಗಾರರನ್ನು ಕಡಿಮೆ ಮಾಡಬಹುದು.

(1) 20
(2) 80
(3) 100
(4) 30

10. ಈ ಕೆಳಗಿನ ಸಂಖ್ಯೆಗಳಲ್ಲಿ ಯಾವುದು ಅತೀ ದೊಡ್ಡ ಸಂಖ್ಯೆಯಾಗಿದೆ?

$2^{250}$, $3^{200}$, $4^{150}$, $5^{100}$

(1) $2^{250}$
(2) $3^{200}$
(3) $4^{150}$
(4) $5^{100}$

ಕಚ್ಚಾ ಕೆಲಸಕ್ಕೆ ಸ್ಥಳ

11. ಎರಡು ಸಂಖ್ಯೆಗಳು 2:3 ಅನುಪಾತದಲ್ಲಿವೆ. ಒಂದು ವೇಳೆ ಪ್ರತಿ ಸಂಖ್ಯೆಯನ್ನು 4ರಷ್ಟು ಹೆಚ್ಚಿಸಿದರೆ, ಅನುಪಾತವು 3:4 ಎಂದು ಬದಲಾಗುತ್ತದೆ. ಆಗ ಆ ಸಂಖ್ಯೆಗಳು ________

(1) 8 ಮತ್ತು 16
(2) 8 ಮತ್ತು 15
(3) 8 ಮತ್ತು 12
(4) 12 ಮತ್ತು 22

12. ಕೆಳಗೆ ನೀಡಿದ ಯಾವ ಉಕ್ತಿಯಲ್ಲಿ (ಎಕ್ಸ್‌ಪ್ರೆಶನ್‌ನಲ್ಲಿ) M > R ಸತ್ಯವಾಗಿರುವುದಿಲ್ಲ?

(1) M = P > Q > R
(2) M > P ≥ Q = R
(3) R = P < Q < M
(4) M = P < Q = R

13. ಯಾವ ಸಂಖ್ಯೆಗೆ 460ರ 20% ಕೂಡಿಸಿದಾಗ ಮೊತ್ತವು 920ರ 70%ಕ್ಕೆ ಸಮನಾಗಿರುತ್ತದೆ?

(1) 762
(2) 926
(3) 335
(4) 552

14. ಒಂದು ಪಂಪ್ ನೀರಿನ ಟ್ಯಾಂಕನ್ನು 2 ಗಂಟೆಗಳಲ್ಲಿ ತುಂಬಬಲ್ಲದು. ಟ್ಯಾಂಕ್‌ನಲ್ಲಿನ ಸೋರಿಕೆಯಿಂದ ಟ್ಯಾಂಕ್ ತುಂಬಲು $2\frac{1}{3}$ ಗಂಟೆಗಳು ಬೇಕಾಯಿತು. ಹಾಗಾದರೆ ಬರೀ ಸೋರಿಕೆಯು ಎಷ್ಟು ಗಂಟೆಗಳಲ್ಲಿ ಟ್ಯಾಂಕ್‌ನಲ್ಲಿರುವ ಎಲ್ಲಾ ನೀರನ್ನು ಖಾಲಿ ಮಾಡಬಲ್ಲದು?

(1) $4\frac{1}{3}$ ಗಂ.
(2) 7 ಗಂ.
(3) 8 ಗಂ.
(4) 14 ಗಂ.

15. ಅಸಲು ರೂ. 30,000ಕ್ಕೆ ಸಾಲಿಯಾನಾ ಶೇಕಡಾ 7 ರಂತೆ ದೊರಕುವ ಚಕ್ರಬಡ್ಡಿ ರೂ. 4347 ಆದರೆ, ಆ ಅವಧಿ (ವರ್ಷಗಳಲ್ಲಿ) ಎಷ್ಟು?

(1) 2
(2) 2 ½
(3) 3
(4) 4

SHIKARAT.COM

16. ಸರಿಹೊಂದಿಕೆಯಾಗದ್ದನ್ನು ಗುರುತಿಸಿ:

(1) ಗಾಯಿಟರ್ – ಅಯೋಡಿನ್ ಕೊರತೆ
(2) ಡಯಾಬೆಟಿಸ್ ಮೆಲಿಟಸ್ – ಇನ್ಸುಲಿನ್ ಕೊರತೆ
(3) ಡಯಾಬೆಟಿಸ್ ಇನ್‌ಸಿಪಿಡಸ್ – ವ್ಯಾಸೊಪ್ರೆಸಿನ್ ಕೊರತೆ
(4) ಅಕ್ರೊಮೆಗಾಲಿ – ಥೈಮೋಸಿನ್ ಕೊರತೆ

ಕಚ್ಚಾ ಕೆಲಸಕ್ಕೆ ಸ್ಥಳ

17. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ :

ಹೇಳಿಕೆ I : ಕೆಲವು ಕಟ್ಟಡಗಳ ಹೊರಗಿನ ಗೋಡೆಗಳನ್ನು ಟೊಳ್ಳಾದ ಇಟ್ಟಿಗೆಗಳಿಂದ ನಿರ್ಮಿಸಿರುತ್ತಾರೆ.

ಹೇಳಿಕೆ II : ಟೊಳ್ಳಾದ ಇಟ್ಟಿಗೆಗಳಲ್ಲಿನ ಗಾಳಿಯ ಪದರಗಳು ಕಟ್ಟಡವನ್ನು ಬೇಸಿಗೆಯಲ್ಲಿ ತಂಪಾಗಿಯೂ ಹಾಗೂ ಚಳಿಗಾಲದಲ್ಲಿ ಬೆಚ್ಚಗಾಗಿಯೂ ಇಡುತ್ತವೆ.

ಸರಿಯಾದ ಆಯ್ಕೆಯನ್ನು ಆರಿಸಿ.

(1) ಹೇಳಿಕೆ I ಸರಿಯಾಗಿದೆ ಹಾಗೂ ಹೇಳಿಕೆ II ತಪ್ಪಾಗಿದೆ

(2) ಎರಡೂ ಹೇಳಿಕೆಗಳು ಸರಿಯಾಗಿದ್ದು, ಹೇಳಿಕೆ II, ಹೇಳಿಕೆ I ರ ಸರಿಯಾದ ಸಮರ್ಥನೆಯಲ್ಲ

(3) ಎರಡೂ ಹೇಳಿಕೆಗಳು ಸರಿಯಾಗಿದ್ದು, ಹೇಳಿಕೆ II, ಹೇಳಿಕೆ I ರ ಸರಿಯಾದ ಸಮರ್ಥನೆಯಾಗಿದೆ

(4) ಎರಡೂ ಹೇಳಿಕೆಗಳು ತಪ್ಪಾಗಿವೆ

18. ನೀರಿಗೆ ________ ತಾಪಮಾನದಲ್ಲಿ ಗರಿಷ್ಠ ಸಾಂದ್ರತೆ ಇರುವುದು.

(1) 0°C (2) 4°C

(3) 27°C (4) 100°C

19. ಈ ಕೆಳಗಿನವುಗಳಲ್ಲಿ ಯಾವುವು ರಾಸಾಯನಿಕ ಕ್ರಿಯೆಗೆ ಉದಾಹರಣೆಯಾಗಿವೆ?

a) ಪ್ಯಾರಫೀನ್ ಮೇಣ ಕರಗುವುದು

b) ಕರ್ಪೂರದ ಉತ್ಪತನ ಪರಿವರ್ತನೆ

c) ಇಂಧನದ ಉರಿಯುವಿಕೆ (ದಹನ ಕ್ರಿಯೆ)

d) ಆಹಾರ ತಯಾರಿಸುವುದು (ಬೇಯಿಸುವುದು)

(1) a ಮತ್ತು b ಮಾತ್ರ (2) b ಮತ್ತು c ಮಾತ್ರ

(3) c ಮತ್ತು d ಮಾತ್ರ (4) a, b, c ಮತ್ತು d

20. ವಾತಾವರಣದಲ್ಲಿ ಬಾಷ್ಪೀಕರಣದ ದರವು ಯಾವಾಗ ಹೆಚ್ಚಾಗುತ್ತದೆ?

(1) ಆರ್ದ್ರತೆ ಕಡಿಮೆಯಾದಂತೆ

(2) ಆರ್ದ್ರತೆ ಹೆಚ್ಚಾದಂತೆ

(3) ತಾಪಮಾನ ಕಡಿಮೆಯಾದಂತೆ

(4) ಮೇಲ್ಮೈ ವಿಸ್ತೀರ್ಣ ಕಡಿಮೆಯಾದಂತೆ

21. ರೈಜೋಬಿಯಂ ಎಂಬುದು ಬಟಾಣಿ ಸಸ್ಯದ ಬೇರು ಗಂಟುಗಳಲ್ಲಿ ಕಂಡುಬರುತ್ತದೆ. ಇದು ಯಾವುದಕ್ಕೆ ಸಹಾಯ ಮಾಡುತ್ತದೆ?

(1) ನೈಟ್ರೋಜನ್ ಸ್ಥಿರೀಕರಣ (2) ದ್ಯುತಿ ಸಂಶ್ಲೇಷಣೆ

(3) ಸಲ್ಫರ್ ಚಯಾಪಚಯ (4) $CO_2$ ಸಮ್ಮಿಲನ (assimilation)

ಕಚ್ಚಾ ಕೆಲಸಕ್ಕೆ ಸ್ಥಳ

22. ಕೆಳಗಿನ ಹೇಳಿಕೆಗಳನ್ನು ಗಮನಿಸಿ :

a) ದೂರದೃಷ್ಟಿ ದೋಷವನ್ನು ಸೂಕ್ತ ನಿಮ್ನ ಮಸೂರ ಉಪಯೋಗಿಸಿ ಸರಿಪಡಿಸಬಹುದು.

b) ಸಮೀಪದೃಷ್ಟಿ ದೋಷವನ್ನು ಸೂಕ್ತ ಪೀನ ಮಸೂರ ಉಪಯೋಗಿಸಿ ಸರಿಪಡಿಸಬಹುದು.

ಮೇಲಿನ ಎರಡು ಹೇಳಿಕೆಗಳಲ್ಲಿ

(1) ಹೇಳಿಕೆ a ಮಾತ್ರ ಸರಿಯಾಗಿದೆ

(2) ಹೇಳಿಕೆ b ಮಾತ್ರ ಸರಿಯಾಗಿದೆ

(3) ಎರಡೂ ಹೇಳಿಕೆಗಳು ಸರಿಯಾಗಿವೆ

(4) ಎರಡೂ ಹೇಳಿಕೆಗಳು ತಪ್ಪಾಗಿವೆ

23. ಒಂದು 5 ಕೆಜಿ ಭಾರದ ವಸ್ತುವನ್ನು ಚಂದ್ರನ ಮೇಲೆ ಕೊಂಡೊಯ್ದರೆ:

(1) ಅದರ ದ್ರವ್ಯರಾಶಿ ಕಡಿಮೆಯಾಗುವುದು

(2) ಅದರ ದ್ರವ್ಯರಾಶಿ ಹೆಚ್ಚಾಗುವುದು

(3) ಅದರ ತೂಕ ಕಡಿಮೆಯಾಗುವುದು

(4) ಅದರ ತೂಕ ಹೆಚ್ಚಾಗುವುದು

24. ಒಂದು ವಸ್ತುವಿನ ಜವವನ್ನು ದ್ವಿಗುಣಗೊಳಿಸಿದರೆ, ಅದರ ಚಲನ ಶಕ್ತಿಯು

(1) ದುಪ್ಪಟ್ಟಾಗುತ್ತದೆ

(2) ನಾಲ್ಕುಪಟ್ಟಾಗುತ್ತದೆ

(3) ಅರ್ಧಪಟ್ಟಾಗುತ್ತದೆ

(4) ಬದಲಾಗುವುದಿಲ್ಲ

SHIKARAT.COM

25. ಪಟ್ಟಿ–Iನ್ನು ಪಟ್ಟಿ–II ರ ಜೊತೆ ಹೊಂದಿಸಿ :

| ಪಟ್ಟಿ–I | ಪಟ್ಟಿ–II |
|---|---|
| a) ಭ್ರೂಣಾಹಾರವಿರುವ ಬೀಜ | i) ತೆಂಗಾಬೀಜ |
| b) ಅನಿಷೇಚನ ಫಲ | ii) ಮಾವು |
| c) ನೈಜಫಲ | iii) ಬಾಳೆಹಣ್ಣು |
| d) ಭ್ರೂಣಾಹಾರವಿಲ್ಲದ ಬೀಜ | iv) ಮೆಕ್ಕೆಜೋಳ |

ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ:

(1) a – iv, b – iii, c – ii, d – i

(2) a – iv, b – iii, c – i, d – ii

(3) a – iii, b – iv, c – i, d – ii

(4) a – i, b – ii, c – iii, d – iv

ಕಚ್ಚಾ ಕೆಲಸಕ್ಕೆ ಸ್ಥಳ

26. ಸಾರ್ವಜನಿಕ ಸರಕುಗಳು ಎಂದರೆ :

a) ಇವುಗಳು ಎಲ್ಲರಿಗೂ ಲಭ್ಯವಿರುವ ಸಂಪನ್ಮೂಲಗಳು ಅಥವಾ ಸೇವೆಗಳಾಗಿವೆ.

b) ಅವು ಅವಿಭಜನೀಯವಾಗಿವೆ ಏಕೆಂದರೆ ವೈಯಕ್ತಿಕ ಬಳಕೆಗಾಗಿ ಸಾರ್ವಜನಿಕ ಸರಕುಗಳನ್ನು ವಿಭಜಿಸಲು ಸಾಧ್ಯವಿಲ್ಲ.

ಕೆಳಗೆ ಕೊಟ್ಟ ಕೋಡ್‌ಗಳ ಸಹಾಯದಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.

(1) a ಮಾತ್ರ  (2) b ಮಾತ್ರ

(3) a ಮತ್ತು b ಎರಡೂ  (4) a ಹಾಗೂ b ಎರಡೂ ಅಲ್ಲ

27. ಹೊಂದಿಸಿ ಬರೆಯಿರಿ :

| ಕಾರ್ಯಕ್ರಮದ ಹೆಸರು | ವರ್ಷ |
|---|---|
| a) ನಾರಿಶಕ್ತಿ ವಂದನ ಅಧಿನಿಯಮ | i) 2016 |
| b) ಮಹಿಳಾ ಇ–ಹಾಟ್ | ii) 2017 |
| c) ಮಾತೃತ್ವ ಸೌಲಭ್ಯ (ತಿದ್ದುಪಡಿ) ಕಾಯ್ದೆ | iii) 2023 |
| d) ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ಪ್ರತಿಬಂಧಕ, ನಿಷೇಧ ಮತ್ತು ನಿವಾರಣಾ) ಕಾಯ್ದೆ | iv) 2013 |

(1) a – iv, b – iii, c – ii, d – i  (2) a – i, b – ii, c – iii, d – iv

(3) a – iii, b – ii, c – i, d – iv  (4) a – iii, b – i, c – ii, d – iv

28. ಬಿ.ಪಿ. ಮಂಡಲ್ ಸಮಿತಿಯ ವರದಿಗೆ ಸಂಬಂಧಿಸಿದ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ :

a) ಇದು ಪರಿಶಿಷ್ಟ ಜಾತಿಗಳಿಗೆ ಶೇ. 15 ರಷ್ಟು ಮೀಸಲಾತಿಯನ್ನು ಶಿಫಾರಸ್ಸು ಮಾಡಿದೆ.

b) ಇದು ಪರಿಶಿಷ್ಟ ಪಂಗಡಗಳಿಗೆ ಶೇ. 7.5 ರಷ್ಟು ಮೀಸಲಾತಿಯನ್ನು ಶಿಫಾರಸ್ಸು ಮಾಡಿದೆ.

c) ಇದು ಇತರೆ ಹಿಂದುಳಿದ ವರ್ಗಗಳಿಗೆ ಶೇ. 27ರಷ್ಟು ಮೀಸಲಾತಿಯನ್ನು ಶಿಫಾರಸ್ಸು ಮಾಡಿದೆ.

d) ಬಿ.ಪಿ. ಮಂಡಲ್ ಸಮಿತಿಯು ತನ್ನ ವರದಿಯನ್ನು 1990ರ ಡಿಸೆಂಬರ್ ತಿಂಗಳಿನಲ್ಲಿ ಭಾರತ ಸರ್ಕಾರಕ್ಕೆ ಸಲ್ಲಿಸಿತು.

ಸರಿಯಾದ ಹೇಳಿಕೆಗಳನ್ನು ಗುರುತಿಸಿ.

(1) ಕೇವಲ a, b ಮತ್ತು c ಸರಿ  (2) ಕೇವಲ a, b ಮತ್ತು d ಸರಿ

(3) ಕೇವಲ a, d ಮತ್ತು c ಸರಿ  (4) ಕೇವಲ b, c ಮತ್ತು d ಸರಿ

ಕಚ್ಚಾ ಕೆಲಸಕ್ಕೆ ಸ್ಥಳ

29. 2011ರ ಜನಗಣತಿಯ ಪ್ರಕಾರ ದೇಶದ ಒಟ್ಟು ಪರಿಶಿಷ್ಟ ಜಾತಿಯ ಜನಸಂಖ್ಯೆಯಲ್ಲಿ ಸುಮಾರು ಶೇಕಡಾ 50 ರಷ್ಟು ಜನಸಂಖ್ಯೆಯನ್ನು ಈ ಕೆಳಗಿನ ನಾಲ್ಕು ರಾಜ್ಯಗಳು ಹೊಂದಿವೆ. ಅವುಗಳನ್ನು ಪರಿಶಿಷ್ಟ ಜಾತಿಯ ಜನಸಂಖ್ಯೆಗೆ ಅನುಗುಣವಾಗಿ ಇಳಿಕೆ ಕ್ರಮದಲ್ಲಿ ಜೋಡಿಸಿರಿ.

ತಮಿಳುನಾಡು

ಬಿಹಾರ

ಉತ್ತರಪ್ರದೇಶ

ಪಶ್ಚಿಮ ಬಂಗಾಳ

(1) ಉತ್ತರ ಪ್ರದೇಶ, ಬಿಹಾರ, ತಮಿಳುನಾಡು, ಪಶ್ಚಿಮ ಬಂಗಾಳ

(2) ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಬಿಹಾರ, ತಮಿಳುನಾಡು

(3) ಬಿಹಾರ, ಉತ್ತರ ಪ್ರದೇಶ, ತಮಿಳುನಾಡು, ಪಶ್ಚಿಮ ಬಂಗಾಳ

(4) ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಬಿಹಾರ, ತಮಿಳುನಾಡು

30. ಸ್ವಚ್ಛ ಭಾರತ ಅಭಿಯಾನದ ಕುರಿತಾದ ಕೆಳಕಂಡ ಹೇಳಿಕೆಗಳನ್ನು ಗಮನಿಸಿ.

a) ಇದನ್ನು ಅಕ್ಟೋಬರ್ 2014ರಲ್ಲಿ ಪ್ರಾರಂಭಿಸಲಾಯಿತು.

b) ಈ ಅಭಿಯಾನದಲ್ಲಿ ಎರಡು ಉಪಯೋಜನೆಗಳಿವೆ. ಎಸ್.ಬಿ.ಎಮ್-ಜಿ ಹಾಗೂ ಎಸ್.ಬಿ.ಎಮ್-ಯು.

c) ಕೇಂದ್ರ ಮತ್ತು ರಾಜ್ಯಸರ್ಕಾರಗಳ ನಿಧಿ ಹಂಚಿಕೆ ಅನುಪಾತವು 50:50ರಷ್ಟಿದೆ. (ಈಶಾನ್ಯ ರಾಜ್ಯಗಳನ್ನು ಹೊರತುಪಡಿಸಿ)

d) ಈಶಾನ್ಯ ರಾಜ್ಯಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಿಧಿ ಹಂಚಿಕೆ ಅನುಪಾತವು 75:25 ರಷ್ಟಿದೆ.

ಸರಿಯಾದ ಹೇಳಿಕೆಗಳನ್ನು ಗುರುತಿಸಿ.

(1) ಕೇವಲ a ಮತ್ತು d ಸರಿ

(2) ಕೇವಲ a ಮತ್ತು b ಸರಿ

(3) ಕೇವಲ b ಮತ್ತು c ಸರಿ

(4) ಕೇವಲ a ಮತ್ತು c ಸರಿ

31. 'ಭಾರತದ ದ್ರಾಕ್ಷಿ ಸಂಸ್ಕರಣಾ ಮಂಡಳಿ' ಎಲ್ಲಿದೆ?

(1) ಚಿಕ್ಕಬಳ್ಳಾಪುರ

(2) ಮುಂಬೈ

(3) ಹುಬ್ಬಳ್ಳಿ

(4) ಪುಣೆ

32. ವಿಸ್ತರಿಸಿದ ನಿಧಿ ಸೌಲಭ್ಯ ಸೇವೆಯನ್ನು ಒದಗಿಸುವ ಸಂಸ್ಥೆ ಯಾವುದು?

(1) ಐ.ಬಿ.ಆರ್.ಡಿ.

(2) ಐ.ಎಂ.ಎಫ್.

(3) ಐ.ಎಫ್.ಸಿ.

(4) ಐ.ಸಿ.ಐ.ಸಿ.ಐ.

ಕಚ್ಚಾ ಕೆಲಸಕ್ಕೆ ಸ್ಥಳ

33. ಎಕ್ಸೋಸ್ಪಿಯರ್ (Exosphere) ನಿಂದ ಹೊರಗಡೆ ತೇಲುವ ಅನಿಲಗಳು ______

(1) ಹೀಲಿಯಮ್ ಮತ್ತು ಹೈಡ್ರೋಜನ್
(2) ಆಕ್ಸಿಜನ್ ಮತ್ತು ಹೈಡ್ರೋಜನ್
(3) ಹೈಡ್ರೋಜನ್ ಮತ್ತು ನೈಟ್ರೋಜನ್
(4) ಆಕ್ಸಿಜನ್ ಮತ್ತು ನೈಟ್ರೋಜನ್

34. ಗಾಳಿಯು ______ ಆದಾಗ ನೀರಿನ ಆವಿಯನ್ನು ಹಿಡಿದಿಟ್ಟುಕೊಳ್ಳುವ ಶಕ್ತಿಯು ______ ಆಗುತ್ತದೆ ಮತ್ತು ಅದು ಹೆಚ್ಚು ತೇವಗಾಳಿಯಾಗುತ್ತದೆ.

(1) ಬಿಸಿ, ಹೆಚ್ಚು
(2) ಬಿಸಿ, ಕಡಿಮೆ
(3) ತಂಪಾಗಿ, ಹೆಚ್ಚು
(4) ತಂಪಾಗಿ, ಕಡಿಮೆ

35. ಕರ್ನಾಟಕದ ರಾಜ್ಯದ ಮರ ______ ಮತ್ತು ಪ್ರಾಣಿ ______

(1) ಆಲ ಮತ್ತು ಹುಲಿ
(2) ತೇಗ ಮತ್ತು ಸಿಂಹ
(3) ಬೀಟೆ (ರೋಸ್‌ವುಡ್) ಮತ್ತು ಜಿಂಕೆ
(4) ಶ್ರೀಗಂಧ ಮತ್ತು ಆನೆ

36. ಕೆಳಗಿನ ಮಾಹಿತಿಯನ್ನು ಪರಿಗಣಿಸಿ :

| | ಜಲಪಾತ | ಪ್ರದೇಶ | ನದಿ |
|---|---|---|---|
| A | ಕಪಿಲಧಾರಾ | ಅಮರಕಂಟಕ | ನರ್ಮದಾ |
| B | ಹೊಗೇನಕಲ್ | ದಖನ್ ಪ್ರಸ್ಥಭೂಮಿ | ಕಾವೇರಿ |
| C | ಪಾಪನಾಶಂ | ನೀಲಗಿರಿ | ತಾಮ್ರಪರ್ಣಿ |
| D | ಲಾಳಗುಳಿ | ಪಶ್ಚಿಮ ಘಟ್ಟ | ಕಾಳಿ |

ಈ ಮೇಲಿನ ಮಾಹಿತಿಗಳ ಸಾಲುಗಳಲ್ಲಿ ಯಾವ ಸಾಲು/ಸಾಲುಗಳು ಸರಿಯಾಗಿ ಹೊಂದಾಣಿಕೆಯಾಗುತ್ತದೆ/ಹೊಂದಾಣಿಕೆಯಾಗುತ್ತವೆ?

(1) A ಮಾತ್ರ
(2) B ಮಾತ್ರ
(3) C ಮಾತ್ರ
(4) A, B, C, D ಗಳೆಲ್ಲವೂ

37. ಈ ಕೆಳಗಿನ ಭಾರತದ ರಾಜ್ಯಗಳಲ್ಲಿ ಅತಿ ಹೆಚ್ಚು ಚಹಾ ಉತ್ಪಾದಿಸುವ ಎರಡು ರಾಜ್ಯಗಳಾವುವು?

(1) ಅಸ್ಸಾಂ ಮತ್ತು ಪಶ್ಚಿಮ ಬಂಗಾಳ
(2) ತಮಿಳುನಾಡು ಮತ್ತು ಕೇರಳಾ
(3) ಕರ್ನಾಟಕ ಮತ್ತು ಗುಜರಾತ್
(4) ಕೇರಳಾ ಮತ್ತು ಕರ್ನಾಟಕ

38. ಈ ಕೆಳಗಿನವುಗಳಲ್ಲಿ ಅಟ್ಲಾಂಟಿಕ್ ಸಾಗರದಲ್ಲಿ ಪ್ರವಹಿಸದ ಸಾಗರ ಪ್ರವಾಹ ಯಾವುದು?

(1) ಆಂಟಿಲಸ್ ಪ್ರವಾಹ
(2) ಕುರೋಷಿವೋ ಪ್ರವಾಹ
(3) ಫ್ಲೋರಿಡಾ ಪ್ರವಾಹ
(4) ಗಲ್ಫ್ ಸ್ಟ್ರೀಂ ಪ್ರವಾಹ

39. ಈ ಕೆಳಗಿನ ಮಾಹಿತಿಯನ್ನು ಗಮನಿಸಿ:

| | ಖಂಡಗಳು | ನದಿಗಳು | ಉಪನದಿಗಳು |
|---|---|---|---|
| A | ಆಫ್ರಿಕಾ | ಗಂಗಾ ನದಿ | ಸಟ್ಲೇಜ್ |
| B | ದಕ್ಷಿಣ ಅಮೇರಿಕಾ | ಅಮೆಜ್ಞಾನ್ | ನೀಗ್ರೋ |
| C | ಏಷ್ಯಾ | ಓಬಿ ನದಿ | ಇರ್‌ಟಿಷ್ |

ಮೇಲಿನ ಮಾಹಿತಿಗಳ ಸಾಲಿನಲ್ಲಿ ಯಾವುದು/ಯಾವುವು ಸರಿಯಾಗಿ ಹೊಂದಾಣಿಕೆಯಾಗುತ್ತವೆ?

(1) A ಮಾತ್ರ
(2) B ಮಾತ್ರ
(3) C ಮಾತ್ರ
(4) B ಮತ್ತು C ಮಾತ್ರ

40. ಭಾರತದ ಸ್ಥಾನಕ್ಕೆ ಸಂಬಂಧಪಟ್ಟಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

a) ಅಕ್ಷಾಂಶಿಕವಾಗಿ ಭಾರತದ ಮುಖ್ಯ ಭೂಭಾಗವು 8°4' ಉತ್ತರದಿಂದ 37°6' ಉತ್ತರದ ವರೆಗೆ ವಿಸ್ತರಿಸಿದೆ.

b) ಭಾರತವು ಪೂರ್ಣ ಪ್ರಮಾಣದಲ್ಲಿ ಉತ್ತರ ಗೋಳಾರ್ಧದಲ್ಲಿ ನೆಲೆಸಿದೆ.

c) ಭಾರತವು ಪರ್ಯಾಯ ದ್ವೀಪವಾಗಿದೆ. ಇದು ಏಷ್ಯಾ ಖಂಡದ ದಕ್ಷಿಣ ಭಾಗದಲ್ಲಿ ನೆಲೆಸಿದೆ.

ಮೇಲೆ ನೀಡಿರುವ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

(1) a ಮಾತ್ರ
(2) b ಮಾತ್ರ
(3) a, b, ಮತ್ತು c
(4) c ಮಾತ್ರ

41. ಈ ಕೆಳಗಿನ ರಾಷ್ಟ್ರಗಳಲ್ಲಿ ಅತಿ ಹೆಚ್ಚು ಕಬ್ಬಿಣದ ಅದಿರು ಉತ್ಪಾದನೆ ಮಾಡುವ ಎರಡು ರಾಷ್ಟ್ರಗಳು ಯಾವುವು?

(1) ಬ್ರೆಜಿಲ್ ಮತ್ತು ಯು.ಎಸ್.ಎ.
(2) ಆಸ್ಟ್ರೇಲಿಯಾ ಮತ್ತು ಚೈನಾ
(3) ಸ್ವೀಡನ್ ಮತ್ತು ಕೆನಡಾ
(4) ಭಾರತ ಮತ್ತು ದಕ್ಷಿಣ ಆಫ್ರಿಕಾ

42. ಈ ಕೆಳಗಿನವುಗಳನ್ನು ಪರಿಗಣಿಸಿ :

| | ಪ್ರದೇಶಗಳು | ಒತ್ತಡದ ವಲಯಗಳು |
|---|---|---|
| A | ಮಹಾ ಹಿಮಾಲಯ ಮತ್ತು ಒಳ ಹಿಮಾಲಯ ನಡುವೆ | ಪ್ರಧಾನ ಗಡಿರೇಖೆಯ ಒತ್ತಡ ವಲಯ |
| B | ಒಳ ಹಿಮಾಲಯ ಮತ್ತು ಸಿವಾಲಿಕ್ ನಡುವೆ | ಪ್ರಧಾನ ಕೇಂದ್ರೀಯ ಒತ್ತಡ ವಲಯ |
| C | ಸಿವಾಲಿಕ್ ಮತ್ತು ಉತ್ತರದ ಮೈದಾನಗಳ ನಡುವೆ | ಹಿಮಾಲಯದ ಮುಂಭಾಗದ ಸ್ಥರಭಂಗ ವಲಯ. |

ಕೊಟ್ಟಿರುವ ಮೇಲಿನ ಮಾಹಿತಿಯಲ್ಲಿ ಎಷ್ಟು ಸಾಲು/ಸಾಲುಗಳು ಸರಿಯಾಗಿ ಹೊಂದಾಣಿಕೆಯಾಗಿದೆ/ವೆ?

(1) ಯಾವುದೂ ಇಲ್ಲ
(2) ಎರಡು ಮಾತ್ರ
(3) ಒಂದು ಮಾತ್ರ
(4) ಎಲ್ಲಾ ಮೂರು

43. ಪಟ್ಟಿ–I (ರಾಜ್ಯಗಳು) ಅನ್ನು ಪಟ್ಟಿ–II (ಜಲಪಾತಗಳು) ಯೊಂದಿಗೆ ಕೆಳಗೆ ಕೊಟ್ಟಿರುವ ಸಂಕೇತಗಳ ಸಹಾಯದಿಂದ ಹೊಂದಿಸಿ :

| ಪಟ್ಟಿ–I (ರಾಜ್ಯಗಳು) | ಪಟ್ಟಿ–II (ಜಲಪಾತಗಳು) |
|---|---|
| a) ಮಧ್ಯಪ್ರದೇಶ | i) ಉಂಚಳ್ಳಿ |
| b) ಕರ್ನಾಟಕ. | ii) ಧುವಾಂದಾರ್ |
| c) ಮೇಘಾಲಯ | iii) ದೂಧ್‌ಸಾಗರ |
| d) ಗೋವಾ | iv) ಮಾರ್ಗರೇಟ್ |

ಸರಿಯಾದ ಉತ್ತರವನ್ನು ಕೆಳಗಿನ ಸಂಕೇತಗಳಿಂದ ಆರಿಸಿ.

(1) a – iii, b – ii c – i, d – iv
(2) a – ii, b – i, c – iv, d – iii
(3) a – iv, b – i, c – iii, d – ii
(4) a – iii, b – ii, c – iv, d – i

44. ಭಾರತದಲ್ಲಿ ರೇಷ್ಮೆ ಉತ್ಪಾದನೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು /ಹೇಳಿಕೆಗಳನ್ನು ಗುರುತಿಸಿ.

a) ಭಾರತದಲ್ಲಿ ರೇಷ್ಮೆ ಉತ್ಪಾದನೆಯಲ್ಲಿ ಕರ್ನಾಟಕ ಪ್ರಥಮ ಸ್ಥಾನದಲ್ಲಿದೆ.

b) ರೇಷ್ಮೆ ಉತ್ಪಾದನೆಯಲ್ಲಿ ಕರ್ನಾಟಕ, ಆಂಧ್ರಪ್ರದೇಶ ಮತ್ತು ಅಸ್ಸಾಂ ಮೊದಲ ಮೂರು ಸ್ಥಾನವನ್ನು ಪಡೆದ ರಾಜ್ಯಗಳಾಗಿವೆ.

(1) a ಮಾತ್ರ ಸರಿ
(2) a ಮತ್ತು b ಎರಡೂ ಸರಿ
(3) b ಮಾತ್ರ ಸರಿ
(4) a ಮತ್ತು b ಎರಡೂ ಸರಿಯಲ್ಲ

ಕಚ್ಚಾ ಕೆಲಸಕ್ಕೆ ಸ್ಥಳ

45. ಪಶ್ಚಿಮ ಘಟ್ಟಗಳು ಈ ಕೆಳಗಿನ ಯಾವ ರಾಜ್ಯದಲ್ಲಿ ಹರಡಿಕೊಂಡಿರುವುದಿಲ್ಲ?

(1) ಕೇರಳ
(2) ಕರ್ನಾಟಕ
(3) ಆಂಧ್ರಪ್ರದೇಶ
(4) ಮಹಾರಾಷ್ಟ್ರ

46. ಮೈಕ್ರೋಸಾಫ್ಟ್ ಆಕ್ಸೆಸ್‌ನ ಟೇಬಲ್ಸ್‌ನಲ್ಲಿ ಕಾಲಮ್‌ಗಳನ್ನು ಏನೆಂದು ಕರೆಯಲಾಗುತ್ತದೆ?

(1) ಮ್ಯಾಕ್ರೋ
(2) ಕಾಲಮ್ಸ್
(3) ರೆಕಾರ್ಡ್ಸ್
(4) ಫೀಲ್ಡ್ಸ್

47. ಟಿವಿ ಬ್ರಾಡ್ಕ್ಯಾಸ್ಟಿಂಗ್ ______ ಪ್ರಕಾರದ ಪ್ರಸರಣವನ್ನು (transmission) ಬಳಸುತ್ತದೆ.

(1) ಸಿಂಪ್ಲೆಕ್ಸ್
(2) ಹಾಫ್ ಡುಪ್ಲೆಕ್ಸ್
(3) ಫುಲ್ ಡುಪ್ಲೆಕ್ಸ್
(4) ಸೆಮಿ ಡುಪ್ಲೆಕ್ಸ್

48. ಈ ಕೆಳಗಿನ ನದಿಗಳನ್ನು ಪರಿಗಣಿಸಿರಿ.

a) ರಿಯೋ ಪರಾನಾ
b) ಮೆಡೈರಾ
c) ರಿಯೋ ಪುರುಸ್
d) ರಿಯೋ ಸ್ಯಾನ್ ಫ್ರಾನ್ಸಿಸ್ಕೋ

ಈ ಮೇಲಿನ ನದಿಗಳಿಗೆ ಸಂಬಂಧಿಸಿದಂತೆ ಯಾವ ಹೇಳಿಕೆ ಸರಿಯಾಗಿದೆ?

(1) ಎಲ್ಲವೂ ಉತ್ತರ ಅಮೇರಿಕಾದ ನದಿಗಳು
(2) ಎಲ್ಲವೂ ದಕ್ಷಿಣ ಅಮೇರಿಕಾದ ನದಿಗಳು
(3) ಎಲ್ಲವೂ ಆಫ್ರಿಕಾದ ನದಿಗಳು
(4) ಎಲ್ಲವೂ ಆಸ್ಟ್ರೇಲಿಯಾದ ನದಿಗಳು

49. ಈ ಕೆಳಗಿನವುಗಳಲ್ಲಿ ಸರಿಯಾದ ಹೇಳಿಕೆಗಳನ್ನು ಆರಿಸಿ.

a) ಉಷ್ಣವಲಯದ ರಾಷ್ಟ್ರಗಳಲ್ಲಿ ಪ್ರಮುಖವಾಗಿ ತೋಟಗಾರಿಕಾ ಬೇಸಾಯ ಮಾಡಲಾಗುವುದು.
b) ಸಿಟ್ರಸ್ ಹಣ್ಣುಗಳನ್ನು ಬೆಳೆಯಲು ಮೆಡಿಟರೇನಿಯನ್ ಪ್ರದೇಶ ಪ್ರಸಿದ್ಧ.
c) ಸ್ಲ್ಯಾಶ್ ಎಂಬುದು ವಲಸೆ ಬೇಸಾಯ
d) ಸಮಶೀತೋಷ್ಣವಲಯದ ರಾಷ್ಟ್ರಗಳಲ್ಲಿ ಹೈನುಗಾರಿಕೆಯು ಸಾಮಾನ್ಯ

(1) a ಮತ್ತು b ಮಾತ್ರ
(2) a, b ಮತ್ತು c ಮಾತ್ರ
(3) a, c ಮತ್ತು d ಮಾತ್ರ
(4) a, b, c ಮತ್ತು d

ಕಚ್ಚಾ ಕೆಲಸಕ್ಕೆ ಸ್ಥಳ

50. 1870 ಮತ್ತು 1880ರ ದಶಕಗಳಲ್ಲಿ ಭಾರತೀಯರಲ್ಲಿ ಅಸಮಾಧಾನವನ್ನು ಉಂಟುಮಾಡಿದ ಬ್ರಿಟಿಷ್ ಕಾಯ್ದೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳನ್ನು ಪರಿಗಣಿಸಿ :

a) ಶಸ್ತ್ರಾಸ್ತ್ರ ಕಾಯ್ದೆ

b) ವರ್ನಾಕ್ಯುಲರ್ ಪ್ರೆಸ್ ಕಾಯ್ದೆ

c) ಇಲ್ಬರ್ಟ್ ಮಸೂದೆ

ಈ ಮೇಲಿನ ಎಷ್ಟು ಕಾಯ್ದೆ/ಮಸೂದೆ ಸರಿಯಾಗಿದೆ/ವೆ?

(1) ಒಂದು ಮಾತ್ರ
(2) ಎರಡು ಮಾತ್ರ
(3) ಎಲ್ಲಾ ಮೂರು
(4) ಯಾವುದೂ ಅಲ್ಲ

51. ಈ ಕೆಳಗಿನ ಯಾವ ಸಮಿತಿ / ಆಯೋಗ ನ್ಯಾಯ ಪಂಚಾಯತಿಗಳ ಸ್ಥಾಪನೆಗೆ ಶಿಫಾರಸ್ಸು ಮಾಡಿತು?

(1) ಬಲವಂತ ರಾಯ್ ಮೆಹ್ತಾ ಸಮಿತಿ
(2) ಅಶೋಕ್ ಮೆಹ್ತಾ ಸಮಿತಿ
(3) ಜಿ.ವಿ.ಕೆ. ರಾವ್ ಸಮಿತಿ
(4) ಕೆ. ಸಂತಾನಂ ಸಮಿತಿ

52. ಇಆರ್ (ER) ಡಯಾಗ್ರಾಮ್‌ನಲ್ಲಿ ಎಂಟಿಟಿ ರಿಲೇಷನ್‌ಶಿಪ್ ಸೆಟ್ ಅನ್ನು ಪ್ರತಿನಿಧಿಸಲು ಯಾವ ಗುರುತನ್ನು ಬಳಸಲಾಗುತ್ತದೆ?

(1) ಡಬಲ್ ಡೈಮಂಡ್
(2) ಅನ್‌ಡಿವೈಡೆಡ್ ರೆಕ್ಟಾಂಗಲ್ಸ್
(3) ಡಾಶ್ಡ್ ಲೈನ್ಸ್
(4) ಡೈಮಂಡ್

53. ಪ್ರಸಿದ್ಧವಾದ 'ಹಿಮವದ್ ಗೋಪಾಲ ಸ್ವಾಮಿ ಬೆಟ್ಟ'ವು ಚಾಮರಾಜನಗರ ಜಿಲ್ಲೆಯ ಯಾವ ತಾಲ್ಲೂಕಿನಲ್ಲಿದೆ?

(1) ಗುಂಡ್ಲುಪೇಟೆ
(2) ಯಳಂದೂರು
(3) ಕೊಳ್ಳೇಗಾಲ
(4) ಸಂತೇಮಾರಳ್ಳಿ

54. 'ಸ್ವದೇಶಿ ಮಿತ್ರನ್' ಪತ್ರಿಕೆಯನ್ನು ಆರಂಭಿಸಿದವರು

(1) ದಾದಾಬಾಯಿ ನವರೋಜಿ
(2) ಗೋಪಾಲ ಗಣೇಶ್ ಅಗರ್ಕರ್
(3) ಫಿರೋಜ್ ಷಾ ಮೆಹ್ತಾ
(4) ಜಿ.ಎಸ್. ಅಯ್ಯರ್

55. ಈ ಕೆಳಗಿನ ಯಾವುದು/ಯಾವುವು 'ಸುಲಿಗೆಯ ಉದ್ಯಮ' ಎಂದು ಕರೆಯಲ್ಪಡುತ್ತದೆ/ವೆ?

a) ಗಣಿಗಾರಿಕೆ

b) ಮೀನುಗಾರಿಕೆ

c) ಮರಕಡಿಯುವಿಕೆ

(1) a ಮಾತ್ರ
(2) a ಮತ್ತು b ಮಾತ್ರ
(3) b ಮಾತ್ರ
(4) a, b ಮತ್ತು c

ಕಚ್ಚಾ ಕೆಲಸಕ್ಕೆ ಸ್ಥಳ

56. ಜೈನ ಧರ್ಮಕ್ಕೆ ಸಂಬಂಧಿಸಿದ ಧಾರ್ಮಿಕ ಗ್ರಂಥಗಳನ್ನು ಗುರುತಿಸಿ.
(1) ಪೀಠಕಗಳು
(2) ಅಂಗಗಳು
(3) ಅರಣ್ಯಕಗಳು
(4) ಅಭಂಗಗಳು

57. ಕರ್ನಾಟಕದಲ್ಲಿರುವ ಈ ಕೆಳಗಿನ ಯಾವ ನದಿ ಜಲಾನಯನ ಪ್ರದೇಶವು ಅತೀ ಹೆಚ್ಚು ಕಬ್ಬನ್ನು ಉತ್ಪಾದಿಸುತ್ತದೆ?
(1) ಕೃಷ್ಣಾ
(2) ಕಾವೇರಿ
(3) ಗೋದಾವರಿ
(4) ಶರಾವತಿ

58. ಹಾವೇರಿ ಜಿಲ್ಲೆಯು ______ ಉತ್ಪಾದನೆಯಲ್ಲಿ ಕರ್ನಾಟಕದಲ್ಲಿ ಪ್ರಥಮ ಸ್ಥಾನದಲ್ಲಿದೆ.
(1) ಶುಂಠಿ
(2) ಅರಿಶಿಣ
(3) ಮೆಣಸಿನಕಾಯಿ
(4) ಬೆಳ್ಳುಳ್ಳಿ

59. ಗ್ರಾಮೀಣ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಗಮನಿಸಿ.
a) ಪ್ರತಿ ವ್ಯಕ್ತಿಗೆ 55 ಲೀ. ಕುಡಿಯುವ ನೀರು ಸರಬರಾಜು ಮಾಡುವ ಗುರಿಯನ್ನು ಸರ್ಕಾರ ಹೊಂದಿದೆ
b) ಕುಡಿಯುವ ನೀರು ಒದಗಿಸುವುದು ಸ್ಥಳೀಯ ಸಂಸ್ಥೆ / ರಾಜ್ಯ ಸರ್ಕಾರ / ಕೇಂದ್ರ ಸರ್ಕಾರಗಳ ಜವಾಬ್ದಾರಿ
c) ಜಲಜೀವನ್ ಮಿಷನ್ ರಾಜ್ಯ ಸರ್ಕಾರದ ಯೋಜನೆ
d) ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿಗೆ ಅಂತರ್‌ಜಲ ಮತ್ತು ಮೇಲ್ಮೈ ಜಲವನ್ನು ಅವಲಂಬಿಸಿದೆ.
ಸರಿಯಾದ ಹೇಳಿಕೆಗಳನ್ನು ಗುರುತಿಸಿ
(1) a, d, b ಮತ್ತು c
(2) c, a ಮತ್ತು b
(3) a, d ಮತ್ತು c
(4) b, a ಮತ್ತು d

60. ಈ ಕೆಳಗಿನ ಗುಪ್ತರ ರಾಜರನ್ನು ಅವರ ಆಳ್ವಿಕೆಯ ಪ್ರಕಾರ ಕಾಲಾನುಕ್ರಮಣಿಕೆಯಲ್ಲಿ ಜೋಡಿಸಿದ ಸರಿಯಾದ ಗುಂಪನ್ನು ಆಯ್ಕೆ ಮಾಡಿರಿ
a) ಕುಮಾರಗುಪ್ತ
b) ರಾಮಗುಪ್ತ
c) ಸಮುದ್ರಗುಪ್ತ
d) 2ನೇ ಚಂದ್ರಗುಪ್ತ
(1) b, c, d, a
(2) c, d, b, a
(3) d, c, a, b
(4) a, c, b, d

61. ಕವಿ ನಾಗಚಂದ್ರ ಈ ಕೆಳಗಿನ ಯಾವ ದೊರೆಯ ಆಸ್ಥಾನವನ್ನು ಅಲಂಕರಿಸಿದ್ದನು?
(1) ವಿಷ್ಣುವರ್ಧನ
(2) ಬಲ್ಲಾಳ – I
(3) ಬಲ್ಲಾಳ – II
(4) ನೃಪಕಾಮ – I

62. ಇಂಗ್ಲೀಷ್ ಪ್ರವಾಸಿಗರಾದ ಫಿಚ್ ಮತ್ತು ನ್ಯೂಬೆರ್ರಿ ಯಾವ ರಾಜನ ಆಳ್ವಿಕೆಯ ಕಾಲದಲ್ಲಿ ಭೇಟಿ ನೀಡಿದ್ದರು?
(1) ಕೃಷ್ಣದೇವರಾಯ
(2) ಎರಡನೇ ಇಬ್ರಾಹಿಂ ಆದಿಲ್ ಷಾಹ
(3) ಮಹ್ಮದ್ ಆದಿಲ್ ಷಾಹ
(4) ಎರಡನೇ ದೇವರಾಯ

ಕಚ್ಚಾ ಕೆಲಸಕ್ಕೆ ಸ್ಥಳ

63. ಈ ಕೆಳಗಿನವುಗಳಲ್ಲಿ ಎಷ್ಟು ಕ್ಷೇತ್ರಗಳನ್ನು ಕರಡು ಕಾನೂನು ಮಾಪನಶಾಸ್ತ್ರ (ಇಂಡಿಯನ್ ಸ್ಟ್ಯಾಂಡರ್ಡ್ ಟೈಮ್) ನಿಯಮಗಳು, 2025 ರಿಂದ ವಿನಾಯಿತಿ ನೀಡಲಾಗಿದೆ?

a) ಖಗೋಳಶಾಸ್ತ್ರ

b) ನೌಕಾಯಾನ ಶಾಸ್ತ್ರ

c) ವೈಜ್ಞಾನಿಕ ಸಂಶೋಧನೆ

d) ರೈಲ್ವೆ

(1) ಎಲ್ಲಾ ನಾಲ್ಕು

(2) ಕೇವಲ ಮೂರು

(3) ಕೇವಲ ಎರಡು

(4) ಕೇವಲ ಒಂದು

64. ಈ ಕೆಳಗಿನ ವ್ಯಕ್ತಿಗಳನ್ನು ಪರಿಗಣಿಸಿರಿ.

a) ಶ್ರೀಮತಿ ವಿಜಯಲಕ್ಷ್ಮಿ ದೇಶಮಾನೆ

b) ಶ್ರೀ ವೆಂಕಪ್ಪ ಅಂಬಾಜಿ ಸುಗಟೇಕರ್

c) ಶ್ರೀ ರಿಕಿ ಗ್ಯಾನ್ ಕೇಜ್

d) ಶ್ರೀ ಪ್ರಶಾಂತ್ ಪ್ರಕಾಶ್

e) ಶ್ರೀ ಹಸನ್ ರಘು

ಈ ಮೇಲಿನವರಲ್ಲಿ ಎಷ್ಟು ಜನರು 2025ನೇ ಸಾಲಿನ ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆ ಆಗಿದ್ದರು?

(1) ಎಲ್ಲಾ ಐವರು

(2) ಕೇವಲ ನಾಲ್ವರು

(3) ಕೇವಲ ಮೂವರು

(4) ಕೇವಲ ಇಬ್ಬರು

65. ಈ ಕೆಳಗಿನ ಎಷ್ಟು ಜಿಲ್ಲೆಯಲ್ಲಿ/ಜಿಲ್ಲೆಗಳಲ್ಲಿ(2024-25ನೇ ಸಾಲಿನ ಕರ್ನಾಟಕ ಬಜೆಟ್ಟಿನಲ್ಲಿ ಘೋಷಿಸಿದಂತೆ) ಮೊದಲ ಹಂತದಲ್ಲಿ ಕಿಸಾನ್ ಮಾಲ್ ಅನ್ನು ಸ್ಥಾಪಿಸಲಾಗುವುದು?

a) ಮೈಸೂರು

b) ಚಿತ್ರದುರ್ಗ

c) ದಾವಣಗೆರೆ

d) ಮದ್ದೂರು (ಮಂಡ್ಯ)

ಆಯ್ಕೆಗಳು:

(1) ಮೇಲಿನ ಎಲ್ಲವೂ

(2) ಕೇವಲ ಮೂರು

(3) ಕೇವಲ ಎರಡು

(4) ಕೇವಲ ಒಂದು

66. ಹೆಚ್ಚುತ್ತಿರುವ ಸೈಬರ್ ಅಪರಾಧಗಳನ್ನು ನಿಯಂತ್ರಿಸಲು ಭಾರತದ ಪ್ರಪ್ರಥಮ ಸೈಬರ್ ಕಮಾಂಡ್ ಸೆಂಟರ್ ಅನ್ನು ಭಾರತದ ಯಾವ ರಾಜ್ಯದಲ್ಲಿ ಏಪ್ರಿಲ್ 2025 ರಲ್ಲಿ ಸ್ಥಾಪಿಸಲಾಗಿದೆ?

(1) ಕರ್ನಾಟಕ
(2) ಮಹಾರಾಷ್ಟ್ರ
(3) ತೆಲಂಗಾಣ
(4) ಗುಜರಾತ್

67. ಸ್ಪೇಡೆಕ್ಸ್ (SpaDex)ಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ / ಹೇಳಿಕೆಗಳು ಸರಿಯಾಗಿದೆ / ಸರಿಯಾಗಿವೆ?

a) ಸ್ಪೇಡೆಕ್ಸ್‌ನ ವಿಸ್ತೃತ ರೂಪ "ಸ್ಪೇಸ್ ಡಾಕಿಂಗ್ ಎಕ್ಸ್‌ಪೆರಿಮೆಂಟ್"

b) ಸ್ಪೇಡೆಕ್ಸ್ ಮಿಷನ್ ಪ್ರತಿಯೊಂದು ಸುಮಾರು 220 ಕೆಜಿ ತೂಕವಿರುವ ಎರಡು ಸಣ್ಣ ಬಾಹ್ಯಾಕಾಶ ನೌಕೆಗಳನ್ನು ಒಳಗೊಂಡಿದೆ.

c) ಆ ಎರಡೂ ಸಣ್ಣ ಬಾಹ್ಯಾಕಾಶ ನೌಕೆಗಳನ್ನು ಜಿಎಸ್‌ಎಲ್‌ವಿಯಿಂದ ಉಡಾಯಿಸಲಾಯಿತು.

d) ಈ ಎರಡೂ ಬಾಹ್ಯಾಕಾಶ ನೌಕೆಗಳನ್ನು ಸತೀಶ್ ಧವನ್ ಸ್ಪೇಸ್ ಸೆಂಟರ್‌ನಿಂದ ಉಡಾಯಿಸಲಾಯಿತು.

(1) a, b, c ಮತ್ತು d
(2) a, b ಮತ್ತು c ಮಾತ್ರ
(3) a, b ಮತ್ತು d ಮಾತ್ರ
(4) d ಮಾತ್ರ

68. 14 ಮೇ, 2025 ರಂದು ಭಾರತದ ಸರ್ವೋಚ್ಚ ನ್ಯಾಯಾಲಯದ 52ನೇ ಮುಖ್ಯ ನ್ಯಾಯಾಧೀಶರಾಗಿ ಯಾರು ಪ್ರಮಾಣವಚನ ಸ್ವೀಕರಿಸಿದರು?

(1) ಜಸ್ಟಿಸ್ ಜೆ.ಕೆ. ಮಹೇಶ್ವರಿ
(2) ಜಸ್ಟಿಸ್ ಸೂರ್ಯ ಕಾಂತ್
(3) ಜಸ್ಟಿಸ್ ಭೂಷಣ್ ರಾಮಕೃಷ್ಣ ಗವಾಯಿ
(4) ಜಸ್ಟಿಸ್ ಸಂಜೀವ್ ಖನ್ನಾ

69. 2025ನೇ ಸಾಲಿನ 97ನೇ ಅಕಾಡೆಮಿ ಪ್ರಶಸ್ತಿಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಜೋಡಿ / ಜೋಡಿಗಳು ಸರಿಯಾಗಿ ಹೊಂದಿಸಲ್ಪಟ್ಟಿದೆ / ಹೊಂದಿಸಲ್ಪಟ್ಟಿವೆ ?

a) ಅತ್ಯುತ್ತಮ ಚಲನಚಿತ್ರ – ದಿ ಬ್ರುಟಲಿಸ್ಟ್

b) ಅತ್ಯುತ್ತಮ ಅಂತಾರಾಷ್ಟ್ರೀಯ ಚಲನಚಿತ್ರ – ಐ ಎಂ ಸ್ಟಿಲ್ ಹಿಯರ್

c) ಅತ್ಯುತ್ತಮ ಅನಿಮೇಟೆಡ್ ಕಿರುಚಿತ್ರ – ಇನ್ ದಿ ಶ್ಯಾಡೋ ಆಫ್ ಸೈಪ್ರಸ್

d) ಅತ್ಯುತ್ತಮ ಕಿರು ಸಾಕ್ಷ್ಯಚಲನ ಚಿತ್ರ – ದಿ ಓನ್ಲಿ ಗರ್ಲ್ ಇನ್ ದಿ ಆರ್ಕೆಸ್ಟ್ರಾ

(1) b ಮತ್ತು c ಮಾತ್ರ
(2) c ಮಾತ್ರ
(3) a, b ಮತ್ತು c ಮಾತ್ರ
(4) a, b, c ಮತ್ತು d

ಕಚ್ಚಾ ಕೆಲಸಕ್ಕೆ ಸ್ಥಳ

70. ಭಾರತದ "ಆಪರೇಷನ್ ಸಿಂಧೂರ" ಮಿಲಿಟರಿ ಕಾರ್ಯಾಚರಣೆಗೆ ಪ್ರತಿಕ್ರಿಯೆಯಾಗಿ ಪಾಕಿಸ್ತಾನವು ನಡೆಸಿದ ಮಿಲಿಟರಿ ಕಾರ್ಯಾಚರಣೆಯ ಹೆಸರೇನು?

(1) ಆಪರೇಷನ್ ಅಲ್ ಮಿಜಾನ್

(2) ಆಪರೇಷನ್ ರಾಹ್ – ಎ – ನಿಜಾತ್

(3) ಆಪರೇಷನ್ ಜಲ್‌ಜಲಾ

(4) ಆಪರೇಷನ್ ಬುನ್ಯಾನ್ ಉಲ್ ಮರ್ಸೂಸ್

71. ಪ್ರಸ್ತುತ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಅಧ್ಯಕ್ಷರು ಯಾರು?

(1) ಎಸ್.ಸೋಮನಾಥ್

(2) ವಿ. ನಾರಾಯಣನ್

(3) ಸಮೀರ್ ವಿ. ಕಾಮತ್

(4) ವಿವೇಕ್ ಭಾಸಿನ್

72. **"SIPRI"** ಅನ್ನು ವಿಸ್ತರಿಸಿರಿ:

(1) ಸ್ವೀಡನ್ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್ಸ್ಟಿಟ್ಯೂಟ್

(2) ಸ್ಟಾಕ್‌ಹೋಂ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್ಸ್ಟಿಟ್ಯೂಟ್

(3) ಶಿವಾಜಿ ಇಂಡಿಯನ್ ಪೀಸ್ ರಿಸರ್ಚ್ ಇನ್ಸ್ಟಿಟ್ಯೂಟ್

(4) ಸಿಂಧೂ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್ಸ್ಟಿಟ್ಯೂಟ್

73. ಈ ಕೆಳಗೆ ನೀಡಲಾಗಿರುವ ಕ್ರೀಡಾಪಟುಗಳಲ್ಲಿ ಯಾರು 2024ನೇ ಸಾಲಿನ ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿಯ ವಿಜೇತರಾಗಿಲ್ಲ?

(1) ಮನು ಭಾಕರ್

(2) ಗುಕೇಶ್ ದೊಮ್ಮರಾಜು

(3) ಸುಭಾಷ್ ರಾಣಾ

(4) ಹರ್ಮನ್‌ಪ್ರೀತ್ ಸಿಂಗ್

74. "ಒಂದು ರಾಜ್ಯ, ಒಂದು ಪ್ರಾದೇಶಿಕ ಗ್ರಾಮೀಣ ಬ್ಯಾಂಕು" ನೀತಿಯಡಿ 1 ಮೇ 2025ರಿಂದ ಕರ್ನಾಟಕ ರಾಜ್ಯವು "ಕರ್ನಾಟಕ ಗ್ರಾಮೀಣ ಬ್ಯಾಂಕ್" ಎಂಬ ಒಂದು ಪ್ರಾದೇಶಿಕ ಗ್ರಾಮೀಣ ಬ್ಯಾಂಕನ್ನು ಹೊಂದಿದ್ದು, ಈ ಬ್ಯಾಂಕಿನ ಕೇಂದ್ರ ಕಛೇರಿ ________ ನಲ್ಲಿರುತ್ತದೆ.

(1) ಬೆಂಗಳೂರು

(2) ಬಳ್ಳಾರಿ

(3) ಬೆಳಗಾವಿ

(4) ಹುಬ್ಬಳ್ಳಿ

75. ಕರ್ನಾಟಕ ರಾಜ್ಯ ಸರ್ಕಾರವು ಇನ್ವೆಸ್ಟ್ ಕರ್ನಾಟಕ–2025 ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಅನಾವರಣಗೊಳಿಸಿದ "ಕ್ಲೀನ್ ಮೊಬಿಲಿಟಿ ನೀತಿ" (Clean Mobility Policy) ಯ ಕಾಲಾವಧಿ ಎಷ್ಟು?

(1) 2025–2035

(2) 2026–2031

(3) 2026–2036

(4) 2025–2030

ಕಚ್ಚಾ ಕೆಲಸಕ್ಕೆ ಸ್ಥಳ

76. ಕೆಳಗಿನವುಗಳಲ್ಲಿ ಮಹಾಜನಪದಗಳನ್ನು ಗುರುತಿಸಿ :

a) ಅಂಗ
b) ಮಗಧ
c) ಕೋಸಲ.
d) ಕಳಿಂಗ

(1) a ಮತ್ತು b
(2) a ಮತ್ತು c
(3) a, b ಮತ್ತು c
(4) a, b, c ಮತ್ತು d

77. ಟಾಲೆಮಿಯು 'ಜಿಯಾಗ್ರಫಿ' ಉಲ್ಲೇಖಿಸಿರುವ ಯಾವ ಪಟ್ಟಣ ಭಾರತ ಮತ್ತು ರೋಮ್ ದೇಶಗಳ ನಡುವಿನ ವ್ಯಾಪಾರ ಕೇಂದ್ರವಾಗಿತ್ತು?

(1) ಅಮರಾವತಿ
(2) ಐಹೊಳೆ
(3) ಅರಿಕಮೇಡು
(4) ಭರೂಚ್

78. ಎನ್.ಎಸ್.ಹರ್ಡೀಕರ್‌ರವರು ಸ್ಥಾಪಿಸಿದ ಹಿಂದುಸ್ತಾನಿ ಸೇವಾದಳವು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಯಾವ ವರ್ಷ ವಿಲೀನಗೊಂಡಿತು?

(1) 1924
(2) 1929
(3) 1931
(4) 1935

79. ಈ ಕೆಳಗಿನ ಯಾವ ಪಲ್ಲವರ ಅರಸನಿಗೆ 'ವಾತಾಪಿಕೊಂಡ' ಎಂಬ ಬಿರುದಿತ್ತು?

(1) ಶಿವಸ್ಕಂದ ವರ್ಮ
(2) ಮಹೇಂದ್ರ ವರ್ಮ
(3) ನರಸಿಂಹ ವರ್ಮ–II
(4) ನರಸಿಂಹ ವರ್ಮ–I

80. ವಿಜಯನಗರಸಾಮ್ರಾಜ್ಯ ಸಾ.ಶ. 1336ರಲ್ಲಿ ಸ್ಥಾಪನೆ ಆದಾಗ ಈ ಕೆಳಗಿನ ಯಾರು ದೆಹಲಿಯ ಸುಲ್ತಾನರಾಗಿದ್ದರು?

(1) ಫಿರೋಜ್ ಷಾ ತುಘಲಕ್
(2) ಸಿಕಂದರ್ ಲೋಧಿ
(3) ಘಿಯಾಸುದ್ದೀನ್ ತುಘಲಕ್
(4) ಮಹಮ್ಮದ್‌ಬಿನ್ ತುಘಲಕ್

81. ಮಧ್ಯಕಾಲೀನ ಭಾರತದಲ್ಲಿ ಕನೌಜ್‌ನ ಪರಮಾಧಿಕಾರಕ್ಕಾಗಿ ನಡೆದ ತ್ರಿಕೋನ ಸ್ಪರ್ಧೆ ಇವರ ನಡುವೆ ನಡೆದಿತ್ತು.

(1) ಗುರ್ಜರ ಪ್ರತಿಹಾರರು, ರಾಷ್ಟ್ರಕೂಟರು ಮತ್ತು ಪಾಲರು
(2) ಕಾರ್ಕೋಟರು, ಗೌಡರು ಮತ್ತು ಕಾಮರೂಪರು
(3) ರಾಷ್ಟ್ರಕೂಟರು, ಪಾಲರು ಮತ್ತು ಕಾರ್ಕೋಟರು
(4) ರಾಷ್ಟ್ರಕೂಟರು, ಬಾದಾಮಿ ಚಾಲುಕ್ಯರು ಮತ್ತು ಕಲ್ಯಾಣಿ ಚಾಲುಕ್ಯರು

ಕಚ್ಚಾ ಕೆಲಸಕ್ಕೆ ಸ್ಥಳ

82. ಈ ಕೆಳಕಂಡವುಗಳಲ್ಲಿ ತಪ್ಪಾದ ಜೋಡಿ ಯಾವುದು?

(1) ದಾಗ್ ಮತ್ತು ಚೆಹರಾ – ಜಲಾಲುದ್ದೀನ್ ಖಿಲ್ಜಿ

(2) ಬಂದೋಬಸ್ತ್ – ತೋದರಮಲ್ಲ

(3) ಪಟ್ಟಾ ವ್ಯವಸ್ಥೆ – ಷೇರ್‌ಷಾ

(4) ನೌರೋಜ್ ಹಬ್ಬ – ಬಲ್ಬನ್

83. ಈ ಕೆಳಗಿನವುಗಳಲ್ಲಿ ಗೌತಮ ಬುದ್ಧರ ಕುರಿತಾದ ತಪ್ಪಾದ ಹೇಳಿಕೆಯನ್ನು /ಹೇಳಿಕೆಗಳನ್ನು ಆಯ್ಕೆ ಮಾಡಿರಿ.

a) ವೈಶಾಲಿಯಲ್ಲಿ ತಮ್ಮ ಮೊದಲ ಬೋಧನೆಯನ್ನು ಮಾಡಿದರು

b) ಇವರು ಚತುರ್ ಆರ್ಯ ಸತ್ಯಗಳನ್ನು ಮತ್ತು ಅಷ್ಟಾಂಗಿಕ ಮಾರ್ಗವನ್ನು ಬೋಧಿಸಿದರು

c) ಇವರ ಮೊದಲ ಹೆಸರು ಸಿದ್ಧಾರ್ಥ

d) ಕುಶಿ ನಗರದಲ್ಲಿ ಇವರು ಮರಣ ಹೊಂದಿದರು.

ಆಯ್ಕೆಗಳು:

(1) a ಮಾತ್ರ

(2) b ಮತ್ತು d ಮಾತ್ರ

(3) a ಮತ್ತು b ಮಾತ್ರ

(4) b ಮತ್ತು c ಮಾತ್ರ

84. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ:

| ವಿಜ್ಞಾನಿಗಳು | ವಿಜ್ಞಾನಿಗಳ ಕ್ಷೇತ್ರ |
|---|---|
| a) ಧನ್ವಂತರಿ | i) ಶಸ್ತ್ರ ಚಿಕಿತ್ಸಕ |
| b) ಸುಶ್ರುತ | ii) ಖಗೋಳಶಾಸ್ತ್ರಜ್ಞ ಮತ್ತು ಗಣಿತ ಶಾಸ್ತ್ರಜ್ಞ |
| c) ಆರ್ಯಭಟ | iii) ರಸವಿದ್ಯಾತಜ್ಞ |
| d) ನಾಗಾರ್ಜುನ | iv) ಆಯುರ್ವೇದ |

(1) a – iii, b – ii, c – i, d – iv

(2) a – iv, b – i, c – ii, d – iii

(3) a – ii, b – iv, c – i, d – iii

(4) a – iv, b – i, c – iii, d – ii

85. 1826ರಲ್ಲಿ ಹರಪ್ಪ ನಾಗರಿಕತೆಯ ಅವಶೇಷಗಳನ್ನು ಮೊಟ್ಟಮೊದಲು ಗುರುತಿಸಿದವರು ಯಾರು?

(1) ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮ್

(2) ಚಾರ್ಲ್ಸ್ ಮ್ಯಾಸನ್

(3) ಆರ್.ಡಿ. ಬ್ಯಾನರ್ಜಿ

(4) ದಯಾರಾಮ್ ಸಹಾನಿ

ಕಚ್ಚಾ ಕೆಲಸಕ್ಕೆ ಸ್ಥಳ

86. ಈ ಕೆಳಗಿನ ರಾಜವಂಶಗಳನ್ನು ಅವುಗಳ ಆಳ್ವಿಕೆಯ ಕಾಲಾನುಕ್ರಮಣಿಕೆಯಲ್ಲಿ ಬರೆಯಿರಿ.

a) ಶುಂಗರು

b) ಕಣ್ವರು

c) ಗುಪ್ತರು

d) ವರ್ಧನರು

(1) a, b, d, c

(2) c, b, d, a

(3) a, b, c, d

(4) d, c, a, b

87. 1757ರ ಪ್ಲಾಸಿ ಕದನ ನಡೆದ ಸಂದರ್ಭದಲ್ಲಿ ದೆಹಲಿಯನ್ನಾಳುತ್ತಿದ್ದ ಮೊಘಲ್ ದೊರೆ ಯಾರು?

(1) ಬಹದ್ದೂರ್ ಷಾ

(2) ಆಲಂಗೀರ್ II

(3) ಜಹಂದರ್ ಷಾ

(4) ಫರುಖ್ಸಿಯಾರ್

88. ಈ ಕೆಳಗಿನ ಯಾವ ಯೋಜನೆಯು ಮಹಿಳೆಯರಿಗೆ ಹೂಡಿಕೆಗಳಲ್ಲಿ ತೊಡಗುವುದಕ್ಕೆ ಅವಕಾಶ ನೀಡುತ್ತಿದೆ?

(1) ಮಹಿಳಾ ಸಮ್ಮಾನ್ ಸೇವಿಂಗ್ಸ್ ಸರ್ಟಿಫಿಕೇಟ್

(2) ಸ್ವಾಮಿತ್ವ ಯೋಜನೆ

(3) ಪಿಎಂ ವಿಶ್ವಕರ್ಮ ಕೌಶಲ ಸಮ್ಮಾನ್

(4) ಪಿಎಂ ಮಿತ್ರ ಯೋಜನೆ

89. ಅರ್ಥಶಾಸ್ತ್ರದ 'ಗ್ರೇಶಮ್' ನಿಯಮ ಸೂಚಿಸುವುದು.

a) ಒಳ್ಳೆಯ ಹಣ ಕೆಟ್ಟ ಹಣವನ್ನು ವ್ಯವಹಾರದ ಹರಿವಿನಿಂದ ಹೊರಗಟ್ಟುತ್ತದೆ

b) ಒಳ್ಳೆಯ ಬ್ಯಾಂಕು ಕೆಟ್ಟ ಬ್ಯಾಂಕ್‌ನ್ನು ಆರ್ಥಿಕತೆಯಿಂದ ಹೊರಗಟ್ಟುತ್ತದೆ

c) ಕೆಟ್ಟ ಬ್ಯಾಂಕು ಒಳ್ಳೆಯ ಬ್ಯಾಂಕ್‌ನ್ನು ಆರ್ಥಿಕತೆಯಿಂದ ಹೊರಗಟ್ಟುತ್ತದೆ

d) ಕೆಟ್ಟ ಹಣ ಒಳ್ಳೆಯ ಹಣವನ್ನು ವ್ಯವಹಾರದ ಹರಿವಿನಿಂದ ಹೊರಗಟ್ಟುತ್ತದೆ

(1) a ಮಾತ್ರ

(2) b ಮತ್ತು c ಮಾತ್ರ

(3) c ಮಾತ್ರ

(4) d ಮಾತ್ರ

ಕಚ್ಚಾ ಕೆಲಸಕ್ಕೆ ಸ್ಥಳ

90. ಕರ್ನಾಟಕ ಸರ್ಕಾರದ 'ಭಾಗ್ಯಲಕ್ಷ್ಮಿ ಯೋಜನೆ' ಕುರಿತು ಈ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ಸರಿಯಾಗಿವೆ?

a) ಬಿಪಿಎಲ್ ಕುಟುಂಬಗಳಲ್ಲಿ ಹೆಣ್ಣುಮಕ್ಕಳ ಜನನವನ್ನು ಪ್ರೋತ್ಸಾಹಿಸುವ ಮೂಲಕ ಲಿಂಗಾನುಪಾತದ ದರವನ್ನು ಸುಧಾರಿಸುವುದು.

b) ಗ್ರಾಮೀಣ ಕುಟುಂಬಗಳಲ್ಲಿ ಆದಾಯದ ಪರಿಸ್ಥಿತಿಗಳನ್ನು ಸುಧಾರಿಸುವುದು.

c) ನಗರ ಕುಟುಂಬಗಳ ಜೀವನ ಮಟ್ಟದ ಪರಿಸ್ಥಿತಿಗಳನ್ನು ಸುಧಾರಿಸುವುದು.

d) ಕೊಳಚೆ ಪ್ರದೇಶ ನಿವಾಸಿಗಳ ಆದಾಯದ ಪರಿಸ್ಥಿತಿಯನ್ನು ಸುಧಾರಿಸುವುದು.

(1) a ಮಾತ್ರ (2) b ಮತ್ತು c ಮಾತ್ರ

(3) d ಮತ್ತು c ಮಾತ್ರ (4) d ಮಾತ್ರ

91. ಪ್ರಾದೇಶಿಕ ಗ್ರಾಮೀಣ ಬ್ಯಾಂಕು (RRB)ಗಳಿಗೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ/ಸರಿಯಾಗಿವೆ?

a) RRB ಗಳ ಬಂಡವಾಳದಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಪ್ರಾಯೋಜಿತ ಬ್ಯಾಂಕುಗಳ ಪಾಲು ಕ್ರಮವಾಗಿ ಶೇ. 50, ಶೇ 15 ಮತ್ತು ಶೇ. 35 ರಷ್ಟಿರುತ್ತದೆ.

b) ಗ್ರಾಮೀಣ ಸಾಲದ ಮೇಲಿನ ನರಸಿಂಹಂ ಆಯೋಗದ ಸಲಹೆಯ ಮೇರೆಗೆ ಇವುಗಳನ್ನು 1975 ರಲ್ಲಿ ಸ್ಥಾಪಿಸಲಾಯಿತು.

ಕೆಳಗಿನ ಕೋಡುಗಳನ್ನು ಬಳಸಿ, ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) a ಮಾತ್ರ (2) b ಮಾತ್ರ

(3) a ಮತ್ತು b ಎರಡೂ ಅಲ್ಲ (4) a ಮತ್ತು b ಎರಡೂ

92. ಭಾರತದ ಕೈಗಾರಿಕಾ ಉತ್ಪಾದನಾ ಸೂಚ್ಯಂಕ (IIP) ಕ್ಕೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಗಮನಿಸಿ.

a) ಇದನ್ನು ಕೇಂದ್ರೀಯ ಸಂಖ್ಯಾಶಾಸ್ತ್ರೀಯ ಸಂಸ್ಥೆಯು ಪ್ರಕಟಿಸುತ್ತದೆ.

b) ಈ ಸೂಚ್ಯಂಕದ ವ್ಯಾಪ್ತಿಯು ಗಣಿಗಾರಿಕೆ, ಉತ್ಪಾದನೆ, ಕಟ್ಟಡ ನಿರ್ಮಾಣ, ವಿದ್ಯುತ್ತು, ಅನಿಲ ಮತ್ತು ನೀರಿನ ಪೂರೈಕೆಯನ್ನು ಒಳಗೊಂಡಿದೆ.

c) ಇದನ್ನು ಮಾಸಿಕ ಆಧಾರದ ಮೇಲೆ ಪ್ರಕಟಿಸಲಾಗುವುದು.

ಕೆಳಗಿನ ಕೋಡುಗಳನ್ನು ಬಳಸಿ, ಸರಿ ಉತ್ತರವನ್ನು ಆಯ್ಕೆ ಮಾಡಿ.

(1) a, b ಮತ್ತು c (2) a ಮತ್ತು b ಮಾತ್ರ.

(3) a ಮತ್ತು c ಮಾತ್ರ. (4) b ಮತ್ತು c ಮಾತ್ರ.

ಕಚ್ಚಾ ಕೆಲಸಕ್ಕೆ ಸ್ಥಳ

93. ಕುಗ್ಗು ಪ್ರಸರಣದ ಸಂದರ್ಭದಲ್ಲಿ ಕೇಂದ್ರ ಬ್ಯಾಂಕು
a) ತೆರೆದ ಮಾರುಕಟ್ಟೆ ಕಾರ್ಯಾಚರಣೆ ಮೂಲಕ ಸರ್ಕಾರಿ ಭದ್ರತಾ ಪತ್ರಗಳನ್ನು ಕೊಂಡುಕೊಳ್ಳಬೇಕು.
b) ರೆಪೋ ದರವನ್ನು ಕಡಿತಗೊಳಿಸಬೇಕು.
c) ಶಾಸನ ಬದ್ಧ ದ್ರವ್ಯತೆಯ ಅನುಪಾತವನ್ನು (SLR) ಹೆಚ್ಚಿಸಬೇಕು.

ಕೆಳಗಿನ ನೀಡಿರುವ ಕೋಡುಗಳನ್ನು ಬಳಸಿ, ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) a ಮಾತ್ರ
(2) a ಮತ್ತು b ಮಾತ್ರ
(3) a ಮತ್ತು c ಮಾತ್ರ
(4) b ಮತ್ತು c ಮಾತ್ರ

94. ಯಾವ ಜೋಡಿ/ಜೋಡಿಗಳು ಸರಿಯಾಗಿ ಹೊಂದಾಣಿಕೆಯಾಗುತ್ತದೆ / ವೆ?

| | | |
|---|---|---|
| a) ಮೊರಾರ್ಜಿ ದೇಸಾಯಿ | – | ಉಪ ಪ್ರಧಾನ ಮಂತ್ರಿ |
| b) ಭೈರೋನ್ ಸಿಂಗ್ ಶೇಖಾವತ್ | – | ರಾಷ್ಟ್ರಪತಿ |
| c) ಇ.ಎಸ್. ವೆಂಕಟರಾಮಯ್ಯ | – | ಭಾರತದ ಮುಖ್ಯ ನ್ಯಾಯಮೂರ್ತಿ |
| d) ನೀಲಂ ಸಂಜೀವ್ ರೆಡ್ಡಿ | – | ಉಪ ರಾಷ್ಟ್ರಪತಿ |

ಕೆಳಗಿನ ಸಂಕೇತಗಳನ್ನು ಉಪಯೋಗಿಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ :

(1) a ಮಾತ್ರ
(2) b ಮಾತ್ರ
(3) a ಮತ್ತು c ಮಾತ್ರ
(4) b, c ಮತ್ತು d ಮಾತ್ರ

95. ಭಾರತ ಸಂವಿಧಾನದ 21–A ವಿಧಿಯ ಸಂಬಂಧವಾಗಿ ಸಂಸತ್ ಅನುಮೋದಿಸಿದ ಮಕ್ಕಳ ಹಕ್ಕಾದ ಉಚಿತ ಮತ್ತು ಕಡ್ಡಾಯ ಶಿಕ್ಷಣ (ಆರ್.ಟಿ.ಇ.) ಕಾಯ್ದೆ, 2009 ಈ ದಿನಾಂಕದಿಂದ ಜಾರಿಗೆ ಬಂದಿತು.

(1) 1ನೇ ಮಾರ್ಚ್ 2009
(2) 1ನೇ ಏಪ್ರಿಲ್ 2009
(3) 1ನೇ ಜೂನ್ 2010
(4) 1ನೇ ಏಪ್ರಿಲ್ 2010

96. ಕೆಳಗಿನ ಯಾವ ಸಮಿತಿಯು ಕಂಟ್ರೋಲರ್ ಆ್ಯಂಡ್ ಆಡಿಟರ್ ಜನರಲ್ ಅವರ ವಾರ್ಷಿಕ ವರದಿಯನ್ನು ಪರಿಶೀಲಿಸುವ ಅಧಿಕಾರ ಹೊಂದಿರುತ್ತದೆ?

(1) ಅಂದಾಜು ಸಮಿತಿ
(2) ಸಾರ್ವಜನಿಕ ಉದ್ದಿಮೆಗಳ ಸಮಿತಿ
(3) ನಿಯಮಗಳ ಸಮಿತಿ
(4) ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ

97. ಸಂವಿಧಾನದ ಯಾವ ವಿಧಿಯ ಪ್ರಕಾರ ರಾಜ್ಯಗಳ ಹೆಸರುಗಳನ್ನು ಬದಲಾವಣೆ ಮಾಡಲು ಅವಕಾಶವಿದೆ?

(1) 1ನೇ ವಿಧಿ
(2) 2ನೇ ವಿಧಿ
(3) 3ನೇ ವಿಧಿ
(4) 4ನೇ ವಿಧಿ

ಕಚ್ಚಾ ಕೆಲಸಕ್ಕೆ ಸ್ಥಳ

98. ಸಂವಿಧಾನದ 79ನೇ ವಿಧಿಯ ಪ್ರಕಾರ ಭಾರತದ ಸಂಸತ್ತು ಒಳಗೊಂಡಿರುವುದು
(1) ಲೋಕಸಭೆ ಮತ್ತು ರಾಜ್ಯಸಭೆ
(2) ರಾಷ್ಟ್ರಪತಿ, ಉಪ-ರಾಷ್ಟ್ರಪತಿ, ಲೋಕಸಭೆ ಮತ್ತು ರಾಜ್ಯಸಭೆ
(3) ರಾಷ್ಟ್ರಪತಿ, ಉಪ-ರಾಷ್ಟ್ರಪತಿ, ಅಟಾರ್ನಿ ಜನರಲ್, ಲೋಕಸಭೆ ಮತ್ತು ರಾಜ್ಯಸಭೆ
(4) ರಾಷ್ಟ್ರಪತಿ, ರಾಜ್ಯಸಭೆ ಮತ್ತು ಲೋಕಸಭೆ

99. ಭಾರತ ಒಂದು ಒಕ್ಕೂಟ, ಏಕೆಂದರೆ,
(1) ಅದು ಸಂವಿಧಾನಿಕ ಸಾರ್ವಭೌಮತೆಯನ್ನು ಹೊಂದಿದೆ
(2) ಅದು ನಾಮಮಾತ್ರ ಮುಖ್ಯಸ್ಥನನ್ನು ಹೊಂದಿದೆ
(3) ಅದು ಸಂಸದೀಯ ಪದ್ಧತಿಯನ್ನು ಹೊಂದಿದೆ
(4) ಅದು ಜವಾಬ್ದಾರಿಯುತ ಕಾರ್ಯಾಂಗವನ್ನು ಹೊಂದಿದೆ

100. ಈ ಕೆಳಗಿನ ಯಾವುದು ಭಾರತದ ಸಂವಿಧಾನದ ಪ್ರಧಾನ ಲಕ್ಷಣವಲ್ಲ?
(1) ಅಧಿಕಾರದ ಹಂಚಿಕೆ
(2) ರಾಜ್ಯಗಳ ಪ್ರಾತಿನಿಧ್ಯತೆಯ ಸಮಾನತೆ
(3) ಸಂವಿಧಾನದ ಸರ್ವೋಚ್ಛತೆ
(4) ಸಂಸದೀಯ ವ್ಯವಸ್ಥೆ

ಕಚ್ಚಾ ಕೆಲಸಕ್ಕೆ ಸ್ಥಳ